**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

ಎಸ್. ಸಿ. ನಂ. **27/2022**

ಪಿ ಡಬ್ಲೂ್ಯ: **5**

ಸಿ ಡಬ್ಲೂ್ಯ: **5**

| | |
|---|---|
| ಸಾಕ್ಷಿದಾರರ ಹೆಸರು | : ದಾಮೋದರ ಮೀಶ್ರಿಕೋಟಿ |
| ತಂದೆಯ ಹೆಸರು | : ಯಲ್ಲಪ್ಪ |
| ವಯಸ್ಸು | : 50 ವರ್ಷಗಳು |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಧಾರವಾಡ |

ದಿನಾಂಕ:17-09-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಸುಮಾರು 2-3 ವರ್ಷಗಳ ಹಿಂದೆ ಚಾಸಾ-4 ರವರ ಮಗ ಮತ್ತು ನನ್ನ ಮಗ ಜಗಳ ಮಾಡಿದ್ದು ಆ ವಿಷಯಗೋಸ್ಕರ ಧಾರವಾಡ ಶಹರ ಪೋಲೀಸ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನನ್ನು ನಿಲ್ಲಿಸಿ ಒಂದು ಪೋಟೋ ತೆಗೆದು ಸಹಿ ಪಡೆದಿದ್ದಾರೆ. ಯಾವ ವಸ್ತುವನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹಾಜರುಪಡಿಸಿದ ವ್ಯಕ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ನಂತರ ಸಾಕ್ಷಿಯು ಬಟ್ಟೆಗಳನ್ನು ಹಾಜರುಪಡಿಸಿದ್ದರು ಎಂದು ಹೇಳುತ್ತಾರೆ. ಈಗ ನನಗೆ ತೋರಿಸಿದ ಪಂಚನಾಮೆಯಲ್ಲಿರುವ ಸಹಿ ನನ್ನದು. ಬಟ್ಟೆ ಜಪ್ತು ಪಂಚನಾಮೆ ನಿಶಾನೆ ಪಿ-5 ಎಂದು ನನ್ನ ಸಹಿ ನಿಶಾನೆ ಪಿ 5(ಬಿ) ಎಂದು ಗುರ್ತಿಸಲಾಯಿತು. ಈಗ ನನಗೆ ತೋರಿಸಿದ ಪೋಟೋದಲ್ಲಿ ನಾನು ಇರುತ್ತೇನೆ. ಸದರಿ ಪೋಟೋಗಳನ್ನು ನಿಶಾನೆ ಪಿ 6 ಮತ್ತು ನಿಶಾನೆ ಪಿ 7 ಎಂದು ಈಗಾಗಲೇ ಗುರ್ತಿಸಲಾಗಿದೆ. ಅದನ್ನು ಪೋಲೀಸ

ಠಾಣೆಯಲ್ಲಿ ತೆಗೆದಿದ್ದಾರೆ. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:**

ದಿಃ21-02-2022 ರಂದು ಧಾರವಾಡ ಶಹರ ಪೋಲೀಸ ಠಾಣೆಗೆ ನನ್ನನ್ನು ಮತ್ತು ಚಾಸಾ-4 ರವರನ್ನು ಠಾಣೆಗೆ ಕರೆಸಿ ಠಾಣೆಯಲ್ಲಿ ಪರಶುರಾಮ ಸುಣಗಾರ ಇತನು ತನ್ನ ಮಗಳಿಗೆ ಸಂಬಂಧಪಟ್ಟ ಬಟ್ಟೆಗಳನ್ನು ಹಾಜರುಪಡಿಸಿದ್ದು ಅದನ್ನು ನಮ್ಮ ಸಮಕ್ಷಮ ಜಪ್ತು ಮಾಡಿ ಬ್ರೌನ ಪೇಪರನಲ್ಲಿ ಪ್ಯಾಕ ಮಾಡಿ ಸೀಲ್ ಮಾಡಿ ನಿಶಾನೆ ಪಿ-5 ರ ಪ್ರಕಾರ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಬಟ್ಟೆಯನ್ನು ಜಪ್ತು ಮಾಡುವ ಸಮಯದಲ್ಲಿ ನಿಶಾನೆ ಪಿ 6 ಮತ್ತು 7 ರ ಪ್ರಕಾರ ಪೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಬಟ್ಟೆಗಳನ್ನು ನೋಡಿದರೆ ಗುರ್ತಿಸಲು ಸಾಧ್ಯವಿಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎನ ವಕೀಲರಿಂದ ಅವರ ಹಿರಿಯ ವಕೀಲರಾದ ಶ್ರೀ ಎಂ.ಎಂ.ಕೆ ವಕೀಲರ ಪರವಾಗಿ :
ಪಾಟೀ ಸವಾಲು ಏನೂ ಇಲ್ಲ ಎಂದು ಹೇಳಿರುತ್ತಾರೆ.
ಮರು ವಿಚಾರಣೆ: ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.